# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧೧



ಶ್ರೀಮಾತೆಯವರ ತಮ್ಮಂದಿರು, ಅವರ ಹೆಣ್ಣುಮಕ್ಕಳು ಇವರ ತಿಳಿಗೇಡಿತನ ಎಷ್ಟೊಂದು ವೃದ್ಧಿಯಾಗುತ್ತಿತ್ತೆಂದರೆ, ಶ್ರೀಮಾತೆ ಪೃಥಿವಿಯಂತೆ ಕ್ಷಮಾಗುಣವನ್ನು ಹೊಂದಿದ್ದರೂ, ಕೆಲವೊಮ್ಮೆ ಅದು ಎಲ್ಲೆ ಮೀರಿ ಹೋಗುತ್ತಿತ್ತು. ಅವರು ಅತ್ಯಂತ ವಿರಕ್ತಿಯಿಂದ ಹಲವು ಬಾರಿ ಹೇಳುತ್ತಿದ್ದರು: ''ಅಯ್ಯೋ, ನಾನು ಕೊಳೆಯಲ್ಲಿ ಹುಟ್ಟಿದ ಕಮಲದಂತೆ ಅರಳಿದ್ದೇನೆ. ಠಾಕೂರ್ ಕೂಡ ಹಾಗೆ, ಸೆಗಣಿ ಗೊಬ್ಬರದಲ್ಲಿ ಹುಟ್ಟಿದ ತಾವರೆ!''

ಅಜ್ಜಿ ತೀರಿಕೊಂಡ ಮರುದಿನ ಬೆಳಿಗ್ಗೆ ಶ್ರೀಮಾತೆ ತಮ್ಮಂದಿರನ್ನು ಹಾಗೂ ನನ್ನನ್ನು ಕರೆದು ಶ್ರಾದ್ಧಕ್ಕೆ ವ್ಯವಸ್ಥೆ ಮಾಡಲು ಹೇಳಿದರು. ಶ್ರಾದ್ಧಕಾರ್ಯದಲ್ಲಿ ಯಾವುದಕ್ಕೂ ಕಡಿಮೆಯಾಗಬಾರದು ಎಂದು ಅವರು ತಮ್ಮ ಬಯಕೆಯನ್ನು ಪ್ರಕಟಪಡಿಸಿದರು. ಬೇಕಾದ ಸಾಮಾನುಗಳ ಪಟ್ಟಿ ತಯಾರಿಸಲಾಯಿತು. ಮಧ್ಯಾಹ್ನ ಊಟವಾದ ಬಳಿಕ ನಾನು ಕಲ್ಕತ್ತೆಗೆ ಹೊರಟೆ.

ಕಲ್ಕತ್ತೆಯಲ್ಲಿ ಮೂರು ದಿನವಿದ್ದು, ಬೇಕಾದ ವಸ್ತುಗಳನ್ನೆಲ್ಲ ಸಂಗ್ರಹಿಸಿ, ಮೂರು ಎತ್ತಿನಗಾಡಿಗಳಲ್ಲಿ ಅವನ್ನೆಲ್ಲ ಜೋಡಿಸಿ, ನಾಲ್ಕನೇ ದಿನ ಜಯರಾಮಬಾಟಿ ತಲುಪಿದೆ. ಶ್ರಾದ್ಧ ನಡೆಯಿತು. ಐವತ್ತು ಹಿತ್ತಾಳೆಯ ಕೊಡ, ಛತ್ರಿ, ಆಸನ ಹಾಗೂ ಮರದ ಪಾದುಕೆಗಳನ್ನು ದಾನ ನೀಡಲಾಯಿತು. ಅಜ್ಜಿಯ ಕೊನೆಯ ಆಸೆಯಂತೆ, ಶ್ರಾದ್ಧದ ಭೋಜನಕ್ಕೆ ಕುಂಬಳಕಾಯಿ ಪಲ್ಯವನ್ನು ಹೇರಳವಾಗಿ ಮಾಡಿಸಿ ಬ್ರಾಹ್ಮಣರಿಗೂ, ಇತರರಿಗೂ ಬಡಿಸಲಾಯಿತು.

ಶ್ರಾದ್ಧದಲ್ಲಿ ತುಂಬಾ ಶ್ರಮ ವಹಿಸಿದ್ದರಿಂದ ಶ್ರೀಮಾತೆಯವರ ದೇಹಾರೋಗ್ಯ ವಿಪರೀತ ಕೆಟ್ಟಿತು. ಅದನ್ನು ಮತ್ತೆ ಪಡೆಯಲು ಅವರಿಗೆ ಒಂದು ತಿಂಗಳಿಗಿಂತಲೂ ಹೆಚ್ಚು ಸಮಯ ಬೇಕಾಯಿತು.

ಶ್ರೀಮಾತೆಯವರ ಕೋಣೆಯ ಪಡಸಾಲೆಯಲ್ಲಿ ಒಂದು ಹಕ್ಕಿಗೂಡು ತೂಗಾಡುತ್ತಿತ್ತು. ಅದರಲ್ಲಿ 'ಗಂಗಾರಾಮ' ಎಂಬ ಹೆಸರಿನ ಗಿಳಿಯೊಂದಿತ್ತು. ಅದನ್ನು ಮನೆಯವರೆಲ್ಲ ''ಓದಪ್ಪಾ, ಗಂಗಾ ರಾಮ'' ಎನ್ನುತ್ತ ಪೀಡಿಸುತ್ತಿದ್ದರು. ಆದರೆ ನನಗೆ ತಿಳಿದಿರುವಂತೆ, ಅಷ್ಟು ದೀರ್ಘಕಾಲದಲ್ಲಿ ಒಂದು ಸಲವೂ ಗಂಗಾರಾಮ ಒಂದಕ್ಷರ ಓದಿದ್ದನ್ನು ನಾನು ನೋಡಿಲ್ಲ. ಆದರೂ, ಅದು ಗೂಡಿನೊಳಗೇ ಅತ್ತಿಂದಿತ್ತ ಓಡಾಡುತ್ತ, ಸಹಜವಾಗಿ 'ಕ್ಯಾಂವ್, ಕ್ಯಾಂವ್' ಎಂದು ಕೂಗುತ್ತಿದ್ದುದನ್ನೇ ಹಲವಾರು ಬಾರಿ ನೋಡಿದ್ದೆ. ಅದಕ್ಕೆ ಚೆನ್ನಾಗಿ ತಿನ್ನುವುದರಲ್ಲಿ ಆಸಕ್ತಿ. ಇದಕ್ಕೆ ನಿದರ್ಶನವಾಗಿ ಹಲವು ಘಟನೆಗಳಿವೆ. ವರದ ಮಾವ ಎಲ್ಲಿಂದಲೋ ಅದನ್ನು ತಂದಿದ್ದ. ಅದಕ್ಕೆ ತಿನ್ನುವ ವಿಷಯದಲ್ಲಿ ಇರುವ ನಾಜೂಕಿಗಾಗಿ ಇರಬೇಕು, ಅದನ್ನು ಶ್ರೀಮಾತೆಯವರ ಮನೆಯ ಬಳಿ ತಂದು ಬಿಟ್ಟಿದ್ದರು.

ವರದ ಮಾವನ ಬಳಿ ಒಂದು ನಾಯಿ ಇತ್ತು. ಒಂದು ದಿನ ಅದು ಇದ್ದಕ್ಕಿದಂತೆ ಮಾಯವಾಗಿಬಿಟ್ಟಿತು. ತುಂಬಾ ಹುಡುಕಿದ ಮೇಲೆ, ಶಿಹೋರ್ ಗ್ರಾಮದ ತುದಿಯಲ್ಲಿ ಒಬ್ಬ ಗೃಹಸ್ಥನ ಮನೆಯಲ್ಲಿತ್ತು . ಮಾವ ಅದನ್ನು ಹುಡುಕಿ ಹಿಡಿದ. ಆದರೆ ಆ ಗೃಹಸ್ಥನಿಂದ ಅದನ್ನು ಪಡೆಯಲಾಗಲಿಲ್ಲ. ಅದೃಷ್ಟವಶಾತ್ ಸ್ನೇಹಿತ ಲಲಿತನು ಸಾಹೇಬನಂತೆ ವೇಷ ಧರಿಸಿಕೊಂಡು, ಪಲ್ಲಕ್ಕಿಯಲ್ಲಿ ಜಯರಾಮಬಾಟಿಗೆ ಬಂದ. ವರದಮಾವ ನಾಯಿಯನ್ನು ಕರೆತರಲು ಲಲಿತನನ್ನು ಕಳುಹಿಸಬೇಕೆಂದು ಶ್ರೀಮಾತೆಯವರನ್ನು ಅನೇಕ ಬಗೆಯಲ್ಲಿ ಅನುನಯದೊಂದಿಗೆ ಒತ್ತಾಯಪಡಿಸಿದ. ಶ್ರೀಮಾತೆ ವಿರಕ್ತಿಯಿಂದ ನನಗೆ ಹೇಳಿದರು. ಅಷ್ಟರಲ್ಲಿ ನಾಯಿ ಮರಳಿ ಬಂತು. ಆ ಗೃಹಸ್ಥ ಲಲಿತನ ವೇಷವನ್ನು ನೋಡಿ, ಇನ್ಸಪೆಕ್ಟರ್ ಎಲ್ಲವನ್ನೂ ವಿಚಾರಿಸಲು ಬಂದಿದ್ದಾನೆ ಎಂದು ಕೊಂಡಿರಬೇಕು.

ಶ್ರೀರಾಮಕೃಷ್ಣರ ಆದೇಶದಂತೆ ಯೋಗಿನ್ ಮಹಾರಾಜ್ ಬಡೋಬಜಾರಿನಿಂದ ಒಂದು ಪಾತ್ರೆಯನ್ನು ಖರೀದಿಸಿ ತಂದಿದ್ದರು. ಅವರನ್ನು ವಿಚಾರಿಸಿದಾಗ ಠಾಕೂರ್‌ಗೆ ತಿಳಿಯಿತು, ನಾಲ್ಕೈದು ಅಂಗಡಿಗಳಲ್ಲಿ ಅದರ ದರ ಕೇಳಿ ತಿಳಿಯದೆ, ಕೇವಲ ಒಂದು ಅಂಗಡಿಯಲ್ಲಿ ಅವರು ಹೇಳಿದ ಬೆಲೆಯನ್ನು ತೆತ್ತು ಕೊಂಡುಕೊಂಡು ಬಂದಿದ್ದಾರೆ ಅಂತ. ಠಾಕೂರರು ಅದನ್ನು ಕೇಳಿ ಅವರಿಗೆ ಬೈದು ಹೇಳಿದರು, ''ಭಕ್ತನಾಗುವುದಿದ್ದರೆ ಹೆಡ್ಡನಾಗಬೇಕೆಂದಿದೆಯೆ? ಹೋಗು, ನಹಬತ್‌ಗೆ ಹೋಗಿ ಮಂತ್ರ ತೆಗೆದುಕೋ.'' ಹೀಗೆ ಅವರು ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದರು.೧

ಶ್ರೀರಾಮಕೃಷ್ಣರ ಶಿಷ್ಯರೆಲ್ಲ ಶ್ರೀಮಾತೆಯವರನ್ನು ದೇಹಪೂರ್ತಿ (ಪಾದಗಳನ್ನು ಹೊರತುಪಡಿಸಿ) ಉತ್ತರೀಯದಿಂದ ಆವರಿಸಿಕೊಂಡಿದ್ದಾಗಲೇ ನೋಡಬಹುದಾಗಿತ್ತು, ಈ ವಿಷಯವನ್ನು ಈಗಾಗಲೇ ಹೇಳಲಾಗಿದೆ. ಇದಕ್ಕೆ ವಿರುದ್ಧವಾಗಿ ಅವರು ನಡೆದುಕೊಂಡದ್ದನ್ನೂ ಬೇರೆ ಕಡೆ ಹೇಳಿದೆ. ಶಾರದಾ ಮಹಾರಾಜರು (ತ್ರಿಗುಣಾತೀತಾನಂದರು) ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆಯುವಾಗ ಅವರಿಂದ ಬೀಜಮಂತ್ರ ಸಹಿತವಾಗಿ ಮಂತ್ರೋಚ್ಚಾರಣೆಯನ್ನು ಕೇಳಿಸಿಕೊಂಡಿದ್ದರು; ಕರಜಪ ವಿಧಿಯನ್ನು ತೋರಿಸಿ ಕೊಡುವಾಗ ಅವರ ಬಲಗೈಯನ್ನು ನೋಡಿದ್ದರು. ಯೋಗಿನ್ ಮಹಾರಾಜರ ದೀಕ್ಷೆಯ ಸಮಯದಲ್ಲೂ ಇದೇ ರೀತಿ ಆಗಿತ್ತು.

ಶ್ರೀಮಾತೆಯವರ ಒಬ್ಬರು ಶಿಷ್ಯರ ಮನೆ ಕಲ್ಕತ್ತೆಯಲ್ಲಿ ಸರ್ಪಂಟೇನ್ ಲೇನ್‌ನಲ್ಲಿತ್ತು; ಅವರು ನನಗಿಂತ ಹಿರಿಯರು. ಮಂತ್ರದೀಕ್ಷೆ ಪಡೆಯುವ ತನಕವೂ ಅವರು ಭಗವಂತನ ಒಂದು ಮೂರ್ತಿಯನ್ನು ಉಪಾಸನೆ ಮಾಡುತ್ತಿದ್ದರು. ಮಂತ್ರದೀಕ್ಷೆ ಪಡೆದುದು ಪೂರ್ತಿ ಬೇರೆಯೇ ಆದ ಮೂರ್ತಿಯನ್ನು ಕುರಿತು. ಇದರ ಪರಿಣಾಮವಾಗಿ ಅವರ ಹೃದಯದಲ್ಲಿ ತಾಕಲಾಟ ಆರಂಭವಾಯಿತು. ಜೀವನವೆಲ್ಲ ಶೂನ್ಯವೆನಿಸತೊಡಗಿತು. ಹೀಗೆ ಹತಾಶೆಗೊಳಗಾದ ಅವರು ಕೆಲವು ದಿನಗಳ ನಂತರ ಇನ್ನೊಬ್ಬರು ಸಹೋದರರ ಸಹಾಯದಿಂದ ಶ್ರೀಮಾತೆಯವರ ಬಳಿಗೆ ಬಂದು, ಎಲ್ಲವನ್ನೂ ನಿವೇದಿಸಿಕೊಂಡರು. ಶ್ರೀಮಾತೆ, ''ಮಂತ್ರ ಸರಿಯಾಗಿದೆ'' ಎಂದರು. ಶ್ರೀಮಾತೆಯವರ ಈ ಮಾತಿನ ಪ್ರಭಾವದಿಂದ ನಿಧಾನವಾಗಿ ಅವರ ಮನಸ್ಸು ಏಕಾಗ್ರಗೊಂಡು, ಅವರ ಹೃದಯದಲ್ಲಿದ್ದ ಅಶಾಂತಿಯೆಲ್ಲ ಮಾಯವಾಗಿ, ಅವರ ಹೃದಯದಲ್ಲಿ ಮಹಾಶಾಂತಿ ನಲಿದಾಡಿತು!

ಭಕ್ತರು ಬರೆದ ಪತ್ರಗಳನ್ನು ಶ್ರೀಮಾತೆಯವರಿಗೆ ಓದಿ ಹೇಳುವ, ಅವರಿಗೆ ಉತ್ತರ ಬರೆಯುವ ಜವಾಬ್ದಾರಿ ಕೆಲವು ವರ್ಷಗಳ ಕಾಲ ನನ್ನ ಮೇಲಿತ್ತು. ಈ ಕೆಲಸಗಳ ನಡುವೆ ಒಂದು ಸಲ ಹೊಸ ಒಂದು ಅನುಭವವುಂಟಾಯಿತು, ಅದನ್ನು ಇಂದಿಗೂ ನನಗೆ ಮರೆಯಲಾಗುತ್ತಿಲ್ಲ. ಶ್ರೀಮಾತೆಯವರ ಹೆಸರಿನಲ್ಲಿ ಬಂದ ಪತ್ರಗಳನ್ನು ಒಡೆಯುವುದಾಗಲೀ, ಓದುವುದಾಗಲೀ ನಾನು ಮಾಡುತ್ತಿರಲಿಲ್ಲ. ಪ್ರತಿದಿನವೂ ನಿರ್ದಿಷ್ಟ ಸಮಯದಲ್ಲಿ ಶ್ರೀಮಾತೆಯವರ ಮುಂದೆ ಅದನ್ನು ಒಡೆದು ಓದುತ್ತಿದ್ದೆ. ಅಂದು ಐದು ಪತ್ರಗಳು ಬಂದಿದ್ದವು. ಅವುಗಳಲ್ಲಿ ಮೂರು ಪೋಸ್ಟ್‌ಕಾರ್ಡ್‌ಗಳು; ಎರಡು ಕವರ್‌ಗಳು. ನಾನು ಮೊದಲು ಒಂದು ಕವರನ್ನು ಒಡೆದು ಓದತೊಡಗಿದೆ. ಆ ಪತ್ರದಿಂದ ತಿಳಿದು ಬಂತು, ಅದು ಶ್ರೀ ಶ— ನ ಪತ್ರವೆಂದು. ಅವನು ಬರೆದಿದ್ದ, ''ಅಮ್ಮಾ, ನಿಮ್ಮ ಪಾದಕಮಲಗಳಲ್ಲಿ ನನ್ನ ಕೋಟಿ ಕೋಟಿ ಪ್ರಣಾಮಗಳೊಂದಿಗೆ ನನ್ನ ನಿವೇದನೆಯೇನೆಂದರೆ, ನಿಮ್ಮ ಈ ದಾಸ..'' ಮುಂದೆ ಓದಲಾಗಲಿಲ್ಲ. ಆರು ಪುಟಗಳ ಪತ್ರ; ಮನಸ್ಸಿನಲ್ಲೇ ಅದನ್ನು ಓದಲು ಸ್ವಲ್ಪ ಹೊತ್ತು ಹಿಡಿಯಿತು. ಆ ಕ್ಷಣದಲ್ಲಿ ಶ್ರೀಮಾತೆ ನನ್ನತ್ತ ನೆಟ್ಟ ನೋಟದಿಂದ ನೋಡುತ್ತಿದ್ದರು. ಅವರ ಕಡೆಗೆ ನೋಡಿದಾಗ ನನ್ನೆದೆ ಢವಢವ ಹೊಡೆದುಕೊಳ್ಳತೊಡಗಿತು. ಅವರು ಏನಾದರೂ ಕೇಳಿದರೆ ಏನೆಂದು ಉತ್ತರ ಕೊಡಲಿ? ಎಂದು ನಾನು ಭಾವಿಸಿದೆ. ಸರಿಯಾಗಿ ಉತ್ತರ ನೀಡಲಾಗದೆ, ಪತ್ರಗಳನ್ನು ಪ್ರತ್ಯೇಕವಾಗಿ ಇಟ್ಟು, ಇನ್ನೊಂದು ಪತ್ರವನ್ನು ಓದತೊಡಗಿದೆ. ಶ್ರೀಮಾತೆ ಮೌನವಾಗಿ ಎಲ್ಲವನ್ನೂ ಕೇಳಿದರು. ಏನೇನು ಉತ್ತರ ಬರೆಯಬೇಕೆಂದು ಅವರು ಹೇಳಿಕೊಟ್ಟರು. ಎಲ್ಲ ಮುಗಿದ ನಂತರ ಶ್ರೀಮಾತೆ, ''ಆ ಪತ್ರವನ್ನೇಕೆ ಓದಲಿಲ್ಲ?'' ಎಂದು ಕೇಳಿದರು. ನನ್ನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಏನೆಂದು ಉತ್ತರ ಕೊಡಲಿ? ಅವರು ನನ್ನ ಗುರು— ಅದೇ ಮಾತೃರೂಪಿಣಿ, ಆ ತಾಯಿಯೆಂದರೆ ನಿಜವಾದ ತಾಯಿಯೇ; ಸ್ವಯಂ ಜಗನ್ಮಾತೆಯೇ! ಎಂದಿಗೂ ಆ ತಾಯಿಗೆ ಇಲ್ಲವೆನ್ನಲು ನನಗೆ ಸಾಧ್ಯವಾಗದು. ಆದರೂ ಆ ಪತ್ರವನ್ನೀಗ ಹೇಗೆ ಓದಲಿ? ಪತ್ರ ಬರೆದವನ ಹಿಂದಿನ ಬದುಕಿನ ದುಷ್ಕಾರ್ಯಗಳ ವರ್ಣನೆಗಳಿಂದ ತುಂಬಿರುವ ಆ ಸಂಗತಿಗಳನ್ನು ಮನುಷ್ಯ ಮಾತ್ರರಿಂದ ಚಿಂತಿಸಲೂ ಸಾಧ್ಯವಾಗದು. ಅದಲ್ಲದೆ, ಎಷ್ಟೊಂದು ಭಯರಹಿತವಾದ ಕಪಟತೆಯಿಲ್ಲದ ರೀತಿ ಅವನು ತನ್ನ ಪಾಪಗಳನ್ನು ವ್ಯಕ್ತಗೊಳಿಸಿದ್ದಾನೆ! ಅದನ್ನು ಹೊಗಳದೆ ಇರಲೂ ಸಾಧ್ಯವಿಲ್ಲ.

ಇರಲಿ, ನನ್ನ ತುಟಿಗಳು ಒಣಗಿ, ನಡುಗುವ ಸ್ವರದಿಂದ ಹೇಳಿದೆ. ''ಹೇಗೆ ಓದಲಮ್ಮಾ? ನನ್ನಿಂದಾಗದು'' ಎಂದೆ. ಅದಕ್ಕೆ ಶ್ರೀಮಾತೆ ಹೇಳಿದರು: ''ತಿಳಿಯಿತು, ಓದಬೇಕಾಗಿಲ್ಲ. ಇಂಥ ಪತ್ರ ಬರೆಯಬಾರದೆಂದು ನಿಷೇಧಿಸಿ ಅವನಿಗೆ ಬರೆ. ನನಗೆ ಬರುವ ಪತ್ರಗಳನ್ನು ಶಿಷ್ಯಂದಿರು, ಹೆಣ್ಣು ಮಕ್ಕಳು ಕೂಡ ಓದುತ್ತಾರೆ. ಹಳ್ಳಿಯಲ್ಲಿ (ಜಯರಾಮಬಾಟಿ) ಯಾರೂ ಇಲ್ಲದಿದ್ದಾಗ ನನ್ನ ತಮ್ಮಂದಿರೂ ಓದುತ್ತಾರೆ. ಆಮೇಲೆ ಹೀಗೆ ಬರೆ, 'ಮೊದಲು ರಾಹುಗ್ರಸ್ತ ಚಂದ್ರನಾಗಿದ್ದೆ, ಈಗ ಠಾಕೂರರ ಆಶ್ರಯವನ್ನು ಪಡೆದುಕೊಂಡು, ಷೋಡಶ ಕಲೆಗಳಿಂದ ಪೂರ್ಣವಾಗಿದ್ದೀಯಾ. ಇನ್ನು ಚಿಂತೆಯೇಕೆ? ಠಾಕೂರರೇ ಎಲ್ಲವನ್ನೂ ಸರಿಪಡಿಸುವರು' ಅಂತ.''

ಓದುಗರೆ! ಶ್ರೀಮಾತೆಯವರ ಈ ಮಾತಿನಲ್ಲಿ ಏನಾದರೂ ಸಾಹಿತ್ಯದ ಗುಣವನ್ನು ಕಂಡಿರಾ? ಎಲ್ಲಾದರೂ ನಿಮಗೆ ಗೋಚರವಾದರೆ, ಖಂಡಿತ ಮರೆಯಬೇಡಿ — ನಿಮ್ಮ ಶ್ರೀಮಾತೆ ಠಾಕೂರರಂತೆಯೇ ನಿರಕ್ಷರಸ್ಥರು ಎಂಬುದಾಗಿ.

---

೧ ಯೋಗಿನ್ ಮಹಾರಾಜರ (ಸ್ವಾಮಿ ಯೋಗಾನಂದರ) ಮಂತ್ರದೀಕ್ಷೆ ಆಗಲೇ ನಡೆದಿತ್ತೆ? ಅಥವಾ ಬಹಳ ದಿನಗಳ ನಂತರ – ಅಂದರೆ ಶ್ರೀರಾಮಕೃಷ್ಣರ ದೇಹತ್ಯಾಗವಾದ ನಂತರ ವೃಂದಾವನದಲ್ಲಿ ಶ್ರೀಮಾತೆ ಇದ್ದಾಗ ನಡೆಯಿತೆ? *(–ಸಂ.)*

ಶ್ರೀಮಾತೆ ಒಂದು ಸಲ ಎರಡನೇ ಅತ್ತೆಗೆ ಬಯ್ಯುತ್ತಿದ್ದರು: ''ನೀವೆಲ್ಲ ಒಂದೆರಡು ಮಕ್ಕಳನ್ನು ಕಟ್ಟಿಕೊಂಡು, ಅದೇ ಚಿಂದಿ ಒದ್ದೆ ಬಟ್ಟೆಯಲ್ಲೇ ಇದ್ದು ಬಿಡಿ; ನಿಮಗೆ ಬೆಳೆಸಲು ಬರುವುದಿಲ್ಲ. ನಾನು ಯಾರೂ ಇಲ್ಲದ ಅನಾಥರ ತಾಯಿ. ಸಾವಿರಾರು ಮಕ್ಕಳನ್ನು ಬೆಳೆಸುತ್ತಿದ್ದೇನೆ. ಕೆಲವರು ಸಾಧುಗಳು, ಕೆಲವರು ಅಸಾಧುಗಳು — ತಲೆ ಕೆಟ್ಟು ಹೋದಾಗ ಬಂದು ಹೋಗುತ್ತಾರೆ, 'ಅಮ್ಮಾ ನನ್ನನ್ನು ದಡ ಸೇರಿಸು!' ಅಂತ. ಇದೆಲ್ಲ ನಿನಗೆ ಅರ್ಥವಾಗುತ್ತಿದೆಯೆ? ಅವರಿಗಂತೂ ಬೇರೆ ಯಾವ ಆಧಾರವೂ ಇಲ್ಲ. ನಮಗೆ ಗೊತ್ತಿರುವುದು ಹಣ, ಧಾನ್ಯ, ಒಟ್ಟು, ಮನೆ, ಕೋಣೆ, ಬಾಗಿಲು ಅಂತ ಮಾತ್ರ. ನೀವು ಹೇಗೆ ಬಂದಿದ್ದೀರೋ ಹಾಗೇ ಹೋಗುತ್ತೀರಿ. ಬಹಳ ಭಾಗ್ಯದಿಂದ ಮನುಷ್ಯ ಜನ್ಮ ದೊರಕುತ್ತದೆ ಅಂತ ಹೇಳುತ್ತಾರೆ. ಅಂಥ ಮನುಷ್ಯ ಜನ್ಮ ದೊರಕಿಯೂ ನೀವು ಏನು ಮಾಡಿದಿರಿ?''

ಜಯರಾಮಬಾಟಿಯಲ್ಲಿ ನನಗೆ ಒಂದು ಸಲ ಜ್ವರ ಬಂತು. ಕೆಲವು ದಿನ ನಾನು ಮಲಗಿರಬೇಕಾಯಿತು. ಹಾಗೆ ಜ್ವರ ಬಂದಾಗ ಶ್ರೀಮಾತೆಗಾದ ಉದ್ವೇಗ, ಶ್ರಮ ಇವನ್ನು ನೆನೆದರೆ ಈಗಲೂ ನನ್ನ ಮನಸ್ಸಿಗೆ ವಿಪರೀತ ಸಂಕಟವಾಗುತ್ತಿದೆ. ನನ್ನ ವಿಶೇಷ ಭಾಗ್ಯದ ವಿಚಾರ ಆಗಾಗ ನೆನಪಾಗುತ್ತಿದೆ, ಅದು ಶ್ರೀಮಾತೆಯವರ ಕೈಯಿಂದ ಸೇವೆ ಮಾಡಿಸಿಕೊಂಡ ಸಂಗತಿ!

ಅವರು ಮಾಡಿದ ಶುಶ್ರೂಷೆಯನ್ನು ಜೀವನವಿಡೀ ಮರೆಯಲು ಸಾಧ್ಯವಿಲ್ಲ! ಅವರು ಯಾವ ರೀತಿ ಸೇವೆ ಮಾಡಿದರು, ಯಾವ ದೂರದೃಷ್ಟಿಯಿಂದ ಅದನ್ನು ತೋರಿಸಿಕೊಟ್ಟರು ಇವುಗಳನ್ನು ನೋಡಿದಾಗ ಅರ್ಥವಾದೀತು, ಅವರು ಯಾವುದೇ ಸುಶಿಕ್ಷಿತಳಾದ ನರ್ಸ್‌ಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲವೆಂದು. ಅವರಿಂದ ಹೀಗೆ ಸೇವೆ ಮಾಡಿಸಿಕೊಂಡುದಕ್ಕೆ ನನ್ನ ಮನಸ್ಸಿನಲ್ಲಿ ನನ್ನ ಬಗ್ಗೆಯೇ ಆಗ ಧಿಕ್ಕಾರ ಮೂಡಿತ್ತು. ಮಗನಾದವನು ತಾಯಿಯ ಸೇವೆ ಮಾಡಬೇಕಾಗಿದ್ದಲ್ಲಿ , ತಾಯಿಯೇ ಮಗನ ಸೇವೆ ಮಾಡುತ್ತಿದ್ದಾಳೆ ಎಂಬುದನ್ನು ನೋಡಿ ಆ ಭಾವ ಮೂಡಿತ್ತು. ಅವರನ್ನು ತಡೆಯಲು ಪ್ರಯತ್ನಿಸಿದೆ; ಆದರೆ ಅದಕ್ಕೆ ಅವರಿಂದ ಬೈಗುಳ ತಿಂದು ಸುಮ್ಮನಾಗಬೇಕಾಯಿತು. ಅವರದು ಒಂದೇ ಉತ್ತರ: ''ತಾಯಿ ಇದನ್ನು ಮಾಡದಿದ್ದರೆ ಊರ ಜನ ಬಂದು ಮಾಡಬೇಕೆ?''

ಜ್ವರವಾಸಿಯಾಗಿ, ತಲೆಯ ಮೇಲೆ ಅವರು ಕೈಯಾಡಿಸುತ್ತಿದ್ದಾಗ ನಾನು ಅವರಿಗೆ ಕೇಳಿಸದಂತೆ ಮನಸ್ಸಿನಲ್ಲೇ ಹಾಡಿಕೊಳ್ಳುತ್ತಿದ್ದೆ:

ಯೋಗೀಂದ್ರ ಮುನೀಂದ್ರ ಇಂದ್ರ ಮೊದಲಾದವರು
ಯಾವ ಪದವನು ಪಡೆಯದಾದರೋ ಧ್ಯಾನದಲಿ
ಅಂಥ ಚರಣವ ಬಯಸಿ ಕಾದಿರುವೆ ನಾನು
ನಿನ್ನ ಕಮಲಾಕಾಂತನು.

ಒಂದು ದಿನ ಹೀಗೆ ಜ್ವರ ಬಂದಾಗ ಅವರು ನನ್ನ ತಲೆಯಲ್ಲಿ ಕೈಯಾಡಿಸುತ್ತಿದ್ದರು. ಚೆನ್ನಾಗಿ ನೆನಪಿದೆ, ಜ್ವರದ ಹೊಡೆತಕ್ಕೆ ನಾನು ಅವರ ಎರಡು ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ, – ''ಹೇಳಬೇಕು, ನೀವು ಯಾರು? ಇಂದು ನಿಮ್ಮನ್ನು ಬಿಡಲಾರೆ.'' ಕೂಡಲೇ ಉತ್ತರ ಲಭಿಸಿತು, ''ಇದೆಲ್ಲ ಏನು ನಿನ್ನದು? ನಿನ್ನ ಮುಂದೆ ನಾನು ತಾಯಿ!'' ಅಂತ. ನಾನು ಸುಮ್ಮನಾಗಿ ವರ ಬೇಡಿ ಪ್ರಾರ್ಥಿಸಿದೆ: ''ಈ ಪ್ರೀತಿಯನ್ನು ನಾನು ಚಿರಕಾಲವೂ ಪಡೆಯುವೆನೆ?'' ಉತ್ತರ ಬಂತು: ''ಹೌದು, ಇಲ್ಲಿ ಉಬ್ಬರ, ಇಳಿತಗಳಿಲ್ಲ.''

ಒಂದು ದಿನ ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದ ದಿನದ ಬಗ್ಗೆ ಪ್ರಸ್ತಾಪವೆತ್ತಿ ಹೇಳತೊಡಗಿದರು: ''ಯಾವಾಗ ಹೀಗಾಯಿತೋ, ಲೋಕದ ಪದ್ಧತಿಯನ್ನು ಅನುಸರಿಸಬೇಕೆಂದುಕೊಂಡು ಕೈಯ ಬಳೆಯನ್ನು ತೆಗೆಯಲು ಹೊರಟೆ. ಅಷ್ಟರಲ್ಲಿ ಠಾಕೂರರು ಕಣ್ಣೆದುರಿಗೆ ನಿಂತುಕೊಂಡಿರುವಂತೆ ಕಾಣಿಸಿಕೊಂಡರು. ಅವರೆಂದರು, ''ನಾನು ಎಲ್ಲಿಗೆ ಹೋಗಿದ್ದೇನೆ ಅಂತ ಬಳೆ ತೆಗೆಯುತ್ತಿದ್ದೀಯಾ? ಈ ಕೋಣೆಯಿಂದ ಆ ಕೋಣೆಗೆ ಹೋದೆನಷ್ಟೆ.'' ಕೈಬಳೆ ಹಾಗೆ ಕೈಯಲ್ಲೇ ಉಳಿಯಿತು. ಮತ್ತೆ ತೆಗೆಯಲಾಗಲಿಲ್ಲ. ನಾನು ಭಾವಿಸಿದೆ, ಜನ ಏನು ಆಡಿಕೊಳ್ಳುತ್ತಾರೋ ಆಡಿಕೊಳ್ಳಲಿ, ಏನೇ ತಿಳಿದುಕೊಳ್ಳಲಿ, ನಾನು ಬಳೆ ಕಳಚಲಾರೆ ಅಂತ. ಇನ್ನೊಂದು ಸಲ ವೃಂದಾವನದಲ್ಲಿ ಹೀಗೆ ಜನರ ಮಾತಿಗೋಸ್ಕರ ಬಳೆ ಕಳಚಲು ಹೋದಾಗಲೂ ಅದೇ ರೀತಿ ಅವರನ್ನು ಕಂಡೆ.''

''ಈಗಲೂ ಕೂಡ ಠಾಕೂರ್ ಯಾವಾಗಲೂ ನಿಮಗೆ ಕಾಣಿಸಿಕೊಳ್ಳುತ್ತಾರೇನು?''

''ನಾವಿಬ್ಬರೂ ಬೇರೆಯೇನು?'' ಹೀಗೆ ಉತ್ತರಿಸುವಷ್ಟರಲ್ಲೇ ಅವರು ನಾಲಿಗೆ ಕಡಿದು, ''ಏನು ಹೇಳಿಬಿಟ್ಟೆ!'' ಎಂದರು.

ಸಣ್ಣತ್ತೆಯ ಬಳಿ ಕೆಲವು ಆಭರಣಗಳಿದ್ದವು. ಅವುಗಳನ್ನು ಸುರಕ್ಷಿತವಾಗಿ ತನ್ನ ಬಳಿ ಇಟ್ಟುಕೊಳ್ಳುತ್ತೇನೆಂದು ಹೇಳಿ ಅವಳ ತಂದೆ ಅವಳನ್ನು ಮರಳು ಮಾಡಿ ಆಭರಣಗಳನ್ನೆಲ್ಲ ತೆಗೆದುಕೊಂಡು ಹೋಗಿದ್ದ. ಆ ಬಳಿಕ ಆಕೆ ಅದನ್ನು ಕೇಳಿದರೂ ಆತ ಕೊಡಲಿಲ್ಲ. ಸ್ನೇಹಿತ ಲಲಿತನು ಜಯರಾಮಬಾಟಿಗೆ ಬಂದು ಆಭರಣಗಳನ್ನು ಬಿಡಿಸಿ ತರಬೇಕೆಂದು ಶ್ರೀಮಾತೆ ಅವನನ್ನು ಮಾರ್ಘೂಟಿಯಾ ಗ್ರಾಮಕ್ಕೆ ಕಳುಹಿಸಿದರು. ಬ್ರಾಹ್ಮಣ (ಸಣ್ಣತ್ತೆಯ ತಂದೆ) ಲಲಿತನನ್ನೂ ಇನ್‌ಸ್ಪೆಕ್ಟರ್ ಎಂದೇ ತಿಳಿದು ಭಯದಿಂದ ನಡುಗತೊಡಗಿದ. ಲಲಿತ ಅವನನ್ನು ಆಭರಣಗಳ ಸಮೇತ ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಬಂದು, ಮಗಳಿಗೆ ಪ್ರತಿಯೊಂದೂ ಆಭರಣವನ್ನು ಹಿಂದಿರುಗಿಸುವಂತೆ ಹೆದರಿಸಿ, ಎಲ್ಲವನ್ನೂ ಮರಳಿ ಕೊಡಿಸಿದ.

೧೯೦೩ರಲ್ಲಿ[೨] ನಾನು ಜಯರಾಮಬಾಟಿಯಲ್ಲಿದ್ದಾಗ, ಶರತ್ ಮಹಾರಾಜರಿಂದ ಒಂದು ಪತ್ರವನ್ನು ಪಡೆದೆ. 'ಗಿರೀಶಚಂದ್ರನಿಗೆ ದುರ್ಗಾಪೂಜೆ ಮಾಡುವ ಇಚ್ಛೆಯಿದೆ; ಪೂಜೆಯ ಸಮಯದಲ್ಲಿ ಶ್ರೀಮಾತೆ ಅಲ್ಲಿರಬೇಕೆಂಬುದೇ ಗಿರೀಶನ ಹಾಗೂ ಅವನ ಅಕ್ಕನ (ಅವಳ ಹೆಸರು ದಕ್ಷಿಣಾ) ಬಯಕೆ; ಒಂದು ವೇಳೆ ಶ್ರೀಮಾತೆ ಅಲ್ಲಿಗೆ ಬರದಿದ್ದರೆ ಅವರ ಪೂಜೆ ನಿರರ್ಥಕವಾಗುವುದು' ಎಂದು ಪತ್ರದಲ್ಲಿ ಬರೆದಿತ್ತು. ಅಲ್ಲದೆ ಶ್ರೀಮಾತೆಯವರನ್ನು ಕರೆದುಕೊಂಡು ಹೋಗಲು ಅವನು ಸಾಧ್ಯವಾದ ಎಲ್ಲ ಯತ್ನವನ್ನೂ ಮಾಡುವನು, ಹಾಗೂ ಶ್ರೀಮಾತೆ ಅಲ್ಲಿಗೆ ಹೋಗುವುದು ನಿಶ್ಚಯವೆಂದರೆ ಅವರ ಎಲ್ಲ

೨ ಸ್ವಾಮಿ ಗಂಭೀರಾನಂದರು ಬರೆದ **Holy Mother Sri Sarada Devi** ಗ್ರಂಥದ ಪ್ರಕಾರ ಇದು ೧೯೦೭ರಲ್ಲಿ. *(-ಅನು.)*

ಖರ್ಚಿನ ಹಣವನ್ನು ಅಲ್ಲಿಂದ ಕಳುಹಿಸುವರು ಎಂದೂ ತಿಳಿಸಲಾಗಿತ್ತು. ಆಗ ಶ್ರೀಮಾತೆಯವರ ಆರೋಗ್ಯ ಅತ್ಯಂತ ಕೆಟ್ಟು ಹೋಗಿತ್ತು; ಹಾಗಿದ್ದರೂ ಅಲ್ಲಿಗೆ ಹೋಗಲು ಅವರು ಒಪ್ಪಿಗೆ ನೀಡಿದರು. ಸಣ್ಣತ್ತೆ ಹಾಗೂ ರಾಧು ಅವರೊಂದಿಗೆ ಹೊರಟರು.

ಸರಿಯಾದ ಸಮಯಕ್ಕೆ ವಿಷ್ಣುಪುರ ತಲುಪಿದಾಗ ಅಲ್ಲಿ ಒಂದು ಹೋಟೇಲಿನಲ್ಲಿ ಮಾಸ್ಟರ್ ಮಹಾಶಯ ಹಾಗೂ ಲಲಿತನನ್ನು ಅನಿರೀಕ್ಷಿತವಾಗಿ ಭೇಟಿಯಾದೆವು. ಅವರು ಎಲ್ಲರಿಗಾಗಿ ಅಲ್ಲಿ ಆಹಾರ ಮೊದಲಾದ ವ್ಯವಸ್ಥೆ ಮಾಡಿದ್ದರು. ಕಲ್ಕತ್ತೆಯಲ್ಲಿ ದಂಗೆಯೆದ್ದಿದೆ ಹಾಗೂ ರಾತ್ರಿ ಹೊತ್ತು ಕತ್ತಲೆಯಾಗಿರುತ್ತದೆ - ಎಂದು ಅವರು ತಿಳಿಸಿದರು. ಆದ್ದರಿಂದ ಅವರು ಮೊದಲೇ ಹೊರಟು ಬಂದಿದ್ದರು.

ಸಾಯಂಕಾಲ ನಾವು ಹೌರಾ ಸ್ಟೇಶನ್ ತಲುಪಿದೆವು. ಗಣೇಂದ್ರನಾಥ ಹಾಗೂ ಲಲಿತನ ಕುದುರೆಗಾಡಿಗಳು ಕಂಡುಬಂದವು. ಶರತ್ ಮಹಾರಾಜ್ ಹಾಗೂ ಗಿರೀಶಚಂದ್ರನ ಅಭಿಪ್ರಾಯವೇನೆಂದರೆ, ಹೌರಾದಿಂದ ಶ್ರೀಮಾತೆಯವರನ್ನು ದೋಣಿಯ ಮೂಲಕ ನೇರ ಬಾಗ್‌ಬಜಾರಿನ ಘಾಟ್‌ಗೆ ಕರೆದುಕೊಂಡು ಹೋಗುವುದು. ಇದರಿಂದ ಯಾವುದೇ ಭಯ, ಆತಂಕಗಳಿಲ್ಲ ಎಂದು ಗಣೇಂದ್ರನಾಥ ಹೇಳಿದ. ಆದರೆ ಶ್ರೀಮಾತೆಯವರಿಗೆ ದೋಣಿಯನ್ನೇರಲು ಭಯವಾಗುತ್ತಿತ್ತು. ಆದ ಕಾರಣ ಲಲಿತನ ಕಂಪಾಸ್ ಗಾಡಿಯಲ್ಲಿ ಒಳಗೆ ಶ್ರೀಮಾತೆ ಮೊದಲಾದವರನ್ನು ಕುಳ್ಳಿರಿಸಿ, ಒಂದು ಕಡೆಯ ಮೆಟ್ಟಿಲಲ್ಲಿ ನಾನು, ಇನ್ನೊಂದರಲ್ಲಿ ಲಲಿತ ಕುಳಿತೆವು. ಕೋಚ್‌ಬಾಕ್ಸಿನಲ್ಲಿ ಗಣೇಂದ್ರನಾಥ ಹಾಗೂ ಸಾಮಾನುಗಳೊಂದಿಗೆ ಮಾಸ್ಟರ್ ಮಹಾಶಯ ಕುಳಿತರು. ಗಂಗಾತೀರದ ಮೂಲಕ ಕುಮಾರಟುಲಿ ಘಾಟಿನ ಕಡೆಗೆ ಗಾಡಿ ಹೊರಟಿತು. ನಂತರ ಕುಮಾರಟುಲಿಯ ಮಧ್ಯಭಾಗವನ್ನು ಹಾದು, ರಾಜವಲ್ಲಭಪಾರಾ ಮೂಲಕ ಬಲರಾಮ ಬಾಬುವಿನ ಮನೆಗೆ ಹೋದೆವು. ಅಲ್ಲಿ ಶ್ರೀಮಾತೆಯವರಿಗೆ ತಂಗಲು ವ್ಯವಸ್ಥೆಯಾಗಿತ್ತು. ದಾರಿಯ ನಡುವೆ ಎಲ್ಲೂ ಗದ್ದಲ ಉಂಟಾಗಲಿಲ್ಲ. ಒಂದು ಬಾರಿ ಮಾತ್ರ ಹುಡುಗರ ಗುಂಪು ಬಂದು, ಸ್ತ್ರೀಯರನ್ನು ನೋಡಿ ಬಿಟ್ಟುಬಿಟ್ಟರು.

ಮರುದಿನ ಬೆಳಗಿನ ಹೊತ್ತು ಗಿರೀಶಚಂದ್ರ ಹಾಗೂ ಅವನ ಅಕ್ಕ ಬಂದು ಶ್ರೀಮಾತೆಗೆ ಪ್ರಣಾಮ ಮಾಡಿ, ಆಮಂತ್ರಣ ನೀಡಿದರು. ಅವನ ಅಕ್ಕ ಹೇಳಿದಳು, ''ಗಿರೀಶನಂತೂ ಸುಮ್ಮನೆ ಕುಳಿತು ಬಿಟ್ಟಿದ್ದನಮ್ಮಾ. 'ಶ್ರೀಮಾತೆ ಬಾರದಿದ್ದರೆ ಯಾರನ್ನು ಕರೆದು ಪೂಜೆ ಮಾಡಲಿ? ಪೂಜೆ ಮಾಡಲಾರೆ' ಎನ್ನುತ್ತಿದ್ದ.''

ಇನ್ನೂ ಪೂಜೆಗೆ ಸಾಕಷ್ಟು ಸಮಯವಿತ್ತು. ಶ್ರೀಮಾತೆಯವರನ್ನು ಕರೆದುಕೊಂಡು ಬಂದ ಮೇಲೆ ಮತ್ತೆ ನಾನು ಜ್ವರ ಹಿಡಿದು ಮಲಗಿದೆ. ಸುಪ್ರಸಿದ್ಧ ಡಾಕ್ಟರ್ ವಿಪಿನವಿಹಾರಿ ಘೋಷ್ ಬಂದು ಪರೀಕ್ಷೆ ಮಾಡಿ ಔಷಧಿ ಹಾಗೂ ಸಬ್ಬಕ್ಕಿ ಗಂಜಿ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದರು. ಶರತ್ ಮಹಾರಾಜರು ಡಾಕ್ಟರರ ಆದೇಶದಂತೆ ಎಲ್ಲವನ್ನೂ ಅಕ್ಷರಶಃ ಪಾಲಿಸಲು ಹೊರಟಿದ್ದರು. ಆದರೆ ನನಗೆ ಸಬ್ಬಕ್ಕಿ ಗಂಜಿ ಸೇವಿಸುವುದು ಸಾಧ್ಯವಾಗಲಿಲ್ಲ, ಅದು ಶ್ರೀಮಾತೆಗೆ ಮಾತ್ರ ಗೊತ್ತಿತ್ತು. ಆದರೆ ಅವರು ಮನೆಯೊಳಗೇ ಇರುತ್ತಿದ್ದರು– ಬೇರೆಯವರ ಮನೆಯಲ್ಲವೆ? ಯಾವಾಗ ಬೇಕೆಂದಾಗ ತಾವೇ ಬಂದು ನೋಡುವುದು ಸಾಧ್ಯವಿರಲಿಲ್ಲ. ಹಜಾರದ ಒಂದು ಮೂಲೆಯಲ್ಲಿ ನಾನು ಸುಮ್ಮನೆ ಮಲಗಿದ್ದೆ. ಇನ್ನೊಂದು ಬದಿಯಲ್ಲಿ ಶರತ್ ಮಹಾರಾಜರಿದ್ದರು.

ಸುಮಾರು ಒಂಬತ್ತು ಗಂಟೆಯ ಹೊತ್ತಿಗೆ ಶರತ್ ಮಹಾರಾಜರು ಅನ್ಯಮನಸ್ಕರಾಗಿದ್ದಾಗ, ಹೊರಗಿನಿಂದ ರಾಧು ಸನ್ನೆ ಮಾಡಿ ಕರೆದು, ಒಂದಿಷ್ಟು ಹಣ್ಣುಹಂಪಲು, ಸಿಹಿತಿಂಡಿ ಇವನ್ನು ನನ್ನ ಕೈಗೆ ಕೊಟ್ಟು, ''ಶ್ರೀಮಾತೆ ಕೊಟ್ಟರು'' ಎಂದಳು. ನಾನು ಸದ್ದಿಲ್ಲದೆ ಅವುಗಳನ್ನು ತಿಂದು ಮಲಗಿದೆ. ಇದೇ ರೀತಿ ಶ್ರೀಮಾತೆ ಮಧ್ಯಾಹ್ನ ಚಪಾತಿ, ಸಿಹಿತಿಂಡಿ; ಸಂಜೆ ಚಪಾತಿ ಹಾಗೂ ತರಕಾರಿ ಇವನ್ನು ಕಳುಹಿಸಿಕೊಟ್ಟರು. ಇತ್ತ ಮನೆಯಿಂದ ಸಬ್ಬಕ್ಕಿ ಗಂಜಿ ಬರುತ್ತಿತ್ತು. ಅದನ್ನು ಚೆಲ್ಲಿ, ತರಕಾರಿ ತುಂಬಿದ್ದ ತಟ್ಟೆಯ ಮೇಲೆ ಗಂಜಿಯ ಪಾತ್ರೆಯನ್ನು ಇಟ್ಟು ಬಿಡುತ್ತಿದ್ದೆ — ಶರತ್ ಮಹಾರಾಜರಿಗೆ ಹೆದರಿ. ಹೀಗೆ ಶ್ರೀಮಾತೆ ನನಗೆ ಗುಟ್ಟಾಗಿ ತಿನ್ನಿಸಿ ಆರೋಗ್ಯ ಉತ್ತಮವಾಗುವಂತೆ ಮಾಡಿದರು.

ಗಿರೀಶಚಂದ್ರನ ದುರ್ಗಾಪೂಜೆ ವಿಜೃಂಭಣೆಯಿಂದ ಆರಂಭವಾಯಿತು. ಶ್ರೀಮಾತೆಯವರ ಸಾನ್ನಿಧ್ಯದೊಂದಿಗೆ 'ಕಲ್ಪಾರಂಭ' [೩] ನಡೆಯಿತು. ಗಿರೀಶಚಂದ್ರ ಹಾಗೂ ಅವನ ಅಕ್ಕನಿಗೆ ಹಿಡಿಸಲಾರದ ಆನಂದ. ಗಿರೀಶಚಂದ್ರ, ''ನೀನು ಶ್ರೀಮಾತೆಯವರನ್ನು ಕರೆದುಕೊಂಡು ಬಂದು, ನಮ್ಮನ್ನು ಖರೀದಿ ಮಾಡಿಬಿಟ್ಟೆ'' ಎಂದು ನನಗೆ ಹೇಳಿದ. ಅವನ ಅಕ್ಕ ಹಿಂದಿನ ವರ್ಷಗಳಂತೆ ಈ ವರ್ಷವೂ ನನಗೆ ಹೊಸ ಬಟ್ಟೆ ನೀಡಿದಳು.

ಮಹಾಸಪ್ತಮಿಯ ದಿನ ಪ್ರಾತಃಕಾಲದಿಂದಲೇ ಬಲರಾಮ ಬಾಬುವಿನ ಮನೆಯಲ್ಲಿ ಭಕ್ತ ಜನರು ಬಂದು ಸೇರಿದರು. ಶ್ರೀಮಾತೆಯವರ ಬಳಿಗೆ ಇಷ್ಟೊಂದು ಸಂಖ್ಯೆಯಲ್ಲಿ ಭಕ್ತರು ಬಂದು ಸೇರಿದ್ದನ್ನು ನಾನು ಹಿಂದೆಂದೂ ಕಂಡಿರಲಿಲ್ಲ. ಜನರಾದ ಮೇಲೆ ಜನರು, ಗುಂಪಾದ ಮೇಲೆ ಗುಂಪು ಬರುತ್ತಿತ್ತು; ಕೆಲವರು ಶ್ರೀಮಾತೆಗೆ ಪ್ರಣಾಮ ಮಾಡುವರು, ಕೆಲವರು ಪುಷ್ಪಾಂಜಲಿ ಅರ್ಪಿಸುವರು. ಶ್ರೀಮಾತೆ ಗಂಟೆಗಟ್ಟಲೆ ನಿಂತಲ್ಲೇ ನಿಂತು ಭಕ್ತರ ಪ್ರಣಾಮ, ಪೂಜೆ ಇವನ್ನೆಲ್ಲ ಸ್ವೀಕರಿಸುತ್ತಿದ್ದರು. ಇದೊಂದು ಅಭೂತಪೂರ್ವ ದೃಶ್ಯ. ಸಪ್ತಮೀ ಪೂಜೆ ನಡೆಯುವುದಾಗಿ ಸುದ್ದಿ ಬಂದಾಗ ಶ್ರೀಮಾತೆ ಗಿರೀಶನ ಮನೆಗೆ ತೆರಳಿ, ಪೂಜೆ ಮುಕ್ತಾಯವಾಗುವವರೆಗೂ ಅಲ್ಲಿಯೇ ಉಳಿದರು. ಅಲ್ಲೂ ಅವರಿಗೆ ವಿಶ್ರಾಂತಿಯಿಲ್ಲ. ಭಕ್ತರು ಪೂಜೆಯ ನಂತರ ಪೂಜೆ ಮಾಡಿದರು. ಒಂದೇ ಪೂಜೆಯ ವೇದಿಕೆಯಲ್ಲಿ – ಒಂದೆಡೆ ಪ್ರತಿಮೆಯ ಪಾದಗಳಲ್ಲಿ ಪತ್ರಪುಷ್ಪಗಳ ರಾಶಿ; ಇನ್ನೊಂದೆಡೆ ಜೀವಂತಮೂರ್ತಿಯಾದ ಶ್ರೀಮಾತೆಯವರ ಚರಣತಲದಲ್ಲಿ ಭಕ್ತರ ಭಕ್ತಿ–ಅರ್ಘ್ಯ–ಚಿಹ್ನೆಯ ಸ್ವರೂಪದಲ್ಲಿ ಬಿಲ್ವದಳ, ತುಳಸೀದಳ, ಚಂದನ ಚರ್ಚಿತವಾದ ತಾವರೆ, ದಾಸವಾಳವೇ ಮೊದಲಾದ ನಾನಾ ಬಗೆಯ ಪುಷ್ಪರಾಶಿ! ಅದೊಂದು ಊಹಿಸಲಾಗದ ಅಪೂರ್ವ ಶೋಭೆ! *(ಮುಂದುವರಿಯುವುದು)*

---

೩. ಪಶ್ಚಿಮ ಬಂಗಾಳದಲ್ಲಿ ದುರ್ಗಾಪೂಜೆಯ ಆರಂಭವಾಗುವ ಆಚರಣೆಗೆ 'ಕಲ್ಪಾರಂಭ' ಎನ್ನುತ್ತಾರೆ. ಒಂದು ಯುಗದ ಆರಂಭ ಎಂದು ಅಕ್ಷರಾರ್ಥ. *(–ಅನು.)*